ಎಸ್. ಸೂರ್ಯಪ್ರಕಾಶ ಪಂಡಿತ್



# ಖಾಲಿಯಾಗದ ಹೊರತು ತುಂಬದು

**ಅಪಾರ ಅರ್ಥ, ಒಳನೋಟಗಳನ್ನು ಕೊಡುವ ಪುಟ್ಟ ಝೆನ್ ಕತೆಗಳನ್ನು ತಾತ್ವಿಕ ವಿವರಣೆಯೊಂದಿಗೆ ಇಲ್ಲಿ ಕೊಡಲಾಗಿದೆ**

ಝೆನ್‌ಗುರು ನ್ಯಾನ್–ಇನ್ ಆಶ್ರಮಕ್ಕೆ ವಿಶ್ವವಿದ್ಯಾಲಯದ ಪ್ರೊಫೆಸರ್ ಒಬ್ಬರು ಬಂದರು; ಝೆನ್ ಎಂದರೇನು – ಎಂದು ತಿಳಿದುಕೊಳ್ಳುವುದು ಅವರ ಉದ್ದೇಶವಾಗಿತ್ತು.

ಗುರುಗಳು ಪ್ರೊಫೆಸರ್‌ಗೆ ಟೀ ಕೊಡಲು ಮುಂದಾದರು. ಕಪ್‌ಗೆ ಟೀ ಸುರಿಯತೊಡಗಿದರು. ಕಪ್ ಅರ್ಧ ತುಂಬಿತು, ಪೂರ್ಣವಾಯಿತು; ಈಗ ಕಪ್ ತುಂಬಿ ಟೀ ಹೊರಗೆ ಹರಿಯತೊಡಗಿತು. ಆದರೆ ಗುರುಗಳು ಕಪ್‌ಗೆ ಟೀ ಸುರಿಯುವುದನ್ನು ಮಾತ್ರ ನಿಲ್ಲಿಸಲಿಲ್ಲ. ಪ್ರೊಫೆಸರ್‌ಗೆ ಗುರುಗಳ ಈ ನಡೆವಳಿಕೆ ಸೋಜಿಗವೆನಿಸಿತು. ಅವರಿಗೆ